# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಎಸ್‌ಸಿ ನಂ. 75/2025

ಸಿಡಬ್ಲುಃ 1 / ಪಿಡಬ್ಲುಃ 1

ದಿನಾಂಕಃ 19.06.2026

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಹುಚ್ಚುಸಾಬ ನದಾಫ |
| ತಂದೆಯ ಹೆಸರು | : | ಹುಸೇನಸಾಬ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಗೌಂಡಿ ಕೆಲಸ |
| ವಾಸ ಸ್ಥಳ | : | ಅಸುಂಡಿ ಗ್ರಾಮ |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

1. ಚಾಸಾ-11 ನನ್ನ ಹೆಂಡತಿ. ಚಾಸಾ-12 ನನ್ನ ಅಳಿಯ. ಚಾಸಾ-13 ನನ್ನ ಅಕ್ಕನ ಮಗ. ಚಾಸಾ-14 ಮತ್ತು 15 ರವರು ನನ್ನ ಮಕ್ಕಳು. ಚಾಸಾ-16 ನನ್ನ ಅಳಿಯ. ಚಾಸಾ-17 ರಿಂದ 19 ರವರು ನಮ್ಮ ಊರಿನವರು. ಮೃತ ಸೈರಾಬಾನು ನನ್ನ ಮಗಳು.

2. ನನಗೆ ಒಟ್ಟು ಮೂರು ಜನ ಮಕ್ಕಳು. ಅವರೆಂದರೆ- ಚಾಸಾ-14, 15 ಮತ್ತು ಮೃತ ಸೈರಾಬಾನು. ಚಾಸಾ-14 ಮತ್ತು 15 ರವರ ಮದುವೆಯಾಗಿರುತ್ತದೆ.

3. ಮೃತ ಸೈರಾಬಾನುಳ ಮದುವೆ ನಿಗಧಿಯಾಗಿತ್ತು. ಮೃತ ಸೈರಾಬಾನು ಬಿ.ಎ. ಬಿ.ಪಿಎಡ್ ಓದಿ ಶಿಕ್ಷಕಿ ಎಂದು ಶಾಲೆಗೆ ಹೋಗುತ್ತಿದ್ದಳು. ಮೊದಲು ನಾನು ಗೌಂಡಿ ಕೆಲಸ ಮಾಡುತ್ತಿದ್ದೆನು, ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ಅಸುಂಡಿ ಗ್ರಾಮದ ಜನತಾ ಪ್ಲಾಟನ ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ ಮತ್ತು ನನ್ನ ಮೃತ ಮಗಳು ಸೇರಿ ವಾಸವಾಗಿದ್ದೆವು.

4. ಮೃತ ಸೈರಾಬಾನುಳ ಮದುವೆಯು ಹೂವಿನಹಡಗಲಿ ತಾಲೂಕಿನ ಕಾನಳ್ಳಿ ಗ್ರಾಮದ ಹುಡುಗನ ಜೊತೆ ಹೋದ ವರ್ಷ 5ನೇ ತಿಂಗಳಲ್ಲಿ ನಿಗಧಿಯಾಗಿತ್ತು. ನನಗೆ ದಿನಾಂಕ ಹೇಳಲು ಬರುವುದಿಲ್ಲ. ಮೃತಳು ನಮ್ಮ ಮುಂದೆ 5 ವರ್ಷಗಳ ಹಿಂದೆ ಮೈಲಾರಿ ಎಂಬ ಹುಡುಗನನ್ನು ಪ್ರೀತಿ ಮಾಡಿದ್ದು, ನಂತರ ತಾವಿಬ್ಬರೂ ಬೇರೆ ಬೇರೆ ಆಗಿದ್ದೇವೆ ಎಂದು ನಮಗೆ ತಿಳಿಸಿದ್ದಳು. ಆದ್ದರಿಂದ ನಾವು ಬೇರೆ ಹುಡುಗನ ಜೊತೆ ಆಕೆಯ ಮದುವೆಯನ್ನು ನಿಗಧಿ ಮಾಡಿದ್ದೆವು. ಈ ವಿಷಯ ಸದರಿ

ಮೈಲಾರಿ ಎಂಬ ಹುಡುಗನಿಗೆ ಗೊತ್ತಾಯಿತು. ಸದರಿ ಮೈಲಾರಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಮೈಲಾರಿ ಇರುತ್ತಾನೆ.

5. ನನ್ನ ಮೃತ ಮಗಳು ಗದಗಕ್ಕೆ ಹೋದಾಗ, ಆರೋಪಿಯು ನನ್ನ ಮಗಳ ಫೋಟೋ ತೆಗೆದು, ವಿಡಿಯೋ ಮಾಡಿ, ಆಕೆಗೆ ಚಿತ್ರಹಿಂಸೆ ಕೊಡುತ್ತಿದ್ದಾನೆ ಎಂದು ನನ್ನ ಮಗಳು ನನ್ನ ಮುಂದೆ ಹೇಳಿದ್ದಳು. ಮದುವೆ ನಿಗಧಿಯಾಗಿದ್ದ 2 ದಿನಗಳ ಮುಂಚೆ, ನಾನು, ನನ್ನ ಹೆಂಡತಿ ಮತ್ತು ಸಂಬಂಧಿಕರೆಲ್ಲಾ ಸೇರಿ ಮದುವೆಗೆ ಬೇಕಾದ ಸಾಮಾನುಗಳನ್ನು ತರಲು ಮಾರುಕಟ್ಟೆಗೆ ಹೋದಾಗ, ಆರೋಪಿಯ ಚಿತ್ರಹಿಂಸೆ ತಾಳಲಾರದೇ ನನ್ನ ಮಗಳು ಚೀಟಿ ಬರೆದಿಟ್ಟು ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ.

6. **ಈ ಬಗ್ಗೆ ನಾನು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ನಾನು ಕೊಟ್ಟ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.**

7. ನಾನು ದೂರನ್ನು ಕೊಟ್ಟ ನಂತರ, ಪೋಲೀಸರು ಸ್ಥಳಕ್ಕೆ ಬಂದು, ಶವವನ್ನು ಕೆಳಗೆ ಇಳಿಸಿ, ಶವದ ಪಂಚನಾಮೆಯನ್ನು ಮಾಡಿರುತ್ತಾರೆ. ನಂತರ ಶವವನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಕಳಿಸಿರುತ್ತಾರೆ. ಆ ಸಮಯದಲ್ಲಿ ಪೋಲೀಸರು ಫೋಟೋ ತೆಗೆದಿರುತ್ತಾರೆ ಮತ್ತು ವಿಡಿಯೋ ಮಾಡಿರುತ್ತಾರೆ. **ಈಗ ಸದರಿ ಫೋಟೋವನ್ನು ನೋಡುತ್ತಿದ್ದು, ಅದರಲ್ಲಿ ನನ್ನ ಮಗಳ ಶವ ಇರುತ್ತದೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು.** ನನ್ನ ಮಗಳ ಶವವನ್ನು ನಾನು ಗುರುತಿಸಿರುತ್ತೇನೆ.

8. ನನ್ನ ಮಗಳು ನೇಣು ಹಾಕಿಕೊಳ್ಳಲು ಉಪಯೋಗಿಸಿದ ಸೀರೆಯನ್ನು ನೋಡಿದರೆ ಗುರುತಿಸುತ್ತೇನೆ. **ಈಗ ತೆರೆದ ನ್ಯಾಯಾಲಯದಲ್ಲಿ ಕಾಗದದ ಕವರಿನಲ್ಲಿ ಪ್ಯಾಕ ಮತ್ತು ಸೀಲ್ ಮಾಡಿದ್ದನ್ನು ತೆಗೆದು, ಅದರಲ್ಲಿರುವ ಸೀರೆಯನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ಗುರುತಿಸಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.**

9. ನನ್ನ ಮಗಳು ಮೃತಪಡುವ ಮೊದಲು ಬರೆದಿಟ್ಟ ಚೀಟಿಯನ್ನು (death note) ನೋಡಿದರೆ ಗುರುತಿಸುತ್ತೇನೆ. **ಈಗ ತೆರೆದ ನ್ಯಾಯಾಲಯದಲ್ಲಿ ಕಾಗದದ ಕವರಿನಲ್ಲಿ ಪ್ಯಾಕ ಮತ್ತು ಸೀಲ್ ಮಾಡಿದ್ದನ್ನು ತೆಗೆದು, ಅದರಲ್ಲಿರುವ ಚೀಟಿಯನ್ನು (death note) ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ಗುರುತಿಸಿ, ಅದರಲ್ಲಿರುವ ಬರಹ ತನ್ನ ಮಗಳ ಕೈಬರಹ ಎಂದು ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು.**

10. ನನ್ನ ಮಗಳ ಮೊಬೈಲನ್ನು ನೋಡಿದರೆ ಗುರುತಿಸುತ್ತೇನೆ. **ಈಗ ತೆರೆದ ನ್ಯಾಯಾಲಯದಲ್ಲಿ ಕಾಗದದ ಕವರಿನಲ್ಲಿ ಪ್ಯಾಕ ಮತ್ತು ಸೀಲ್ ಮಾಡಿದ್ದನ್ನು ತೆಗೆದು, ಅದರಲ್ಲಿರುವ ಒಂದು ತಿಳಿ ಹಸಿರು ಬಣ್ಣದ ಹಿಂಭಾಗದಲ್ಲಿ M ಅಕ್ಷರದ ಸಿಂಬಾಲ ಇರುವ ಮೊಬೈಲನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದು ತನ್ನ ಮೃತ ಮಗಳ ಮೊಬೈಲ ಎಂದು ಗುರುತಿಸಿದ್ದು, ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು.**

11. ನನ್ನ ಮಗಳ ಸಾವಿಗೆ ಆರೋಪಿಯೇ ಕಾರಣನಾಗಿದ್ದಾನೆ. ಆರೋಪಿ ನನ್ನ ಮಗಳಿಗೆ ನೀನು ಹೇಗೆ ಮದುವೆ ಮಾಡಿಕೊಳ್ಳುತ್ತೀಯಾ ಎಂದು ನನ್ನ ಮಗಳಿಗೆ ಕಿರುಕುಳ ಕೊಟ್ಟು, ಆಕೆಯ ಫೋಟೋ ಮತ್ತು ವಿಡಿಯೋವನ್ನು ಎಲ್ಲರ ಮೊಬೈಲಗೂ ಬಿಡುತ್ತೇನೆ ಎಂದು ಹೆದರಿಸಿದ್ದರಿಂದ, ನನ್ನ ಮಗಳು ಮರ್ಯಾದೆಗೆ ಅಂಜಿ, ಆರೋಪಿಯ ಕಾಟ ತಾಳದೇ, ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಪ್ರಕರಣದ ಬಗ್ಗೆ ಪೋಲೀಸರಿಗೆ ನಾನು ಮರು ಹೇಳಿಕೆ ನೀಡಿರುತ್ತೇನೆ.

**ಪಾಟಿ ಸವಾಲುಃ ಶ್ರೀ ಎ.ವಿ. ಜೋಯಿಸ್, ಆರೋಪಿ ಪರ ವಕೀಲರಿಂದಃ**

**(ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ, ಪಾಟಿ ಸವಾಲಿಗೆ ಸಮಯ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**